

ಪ್ರಚಲಿತವಾಗಿರುವ ಕಲ್ಪನೆಗಿಂತ ಭಿನ್ನವಾಗಿವೆ. ಸಾಮಾನ್ಯವಾಗಿ ನಾವು 'ದೇಹವೇ ದೇಗುಲ' ಎಂದು ನಂಬುತ್ತೇವೆ. ದೇಹವು ತನ್ನ ರೂಪವನ್ನು ಕಾಯ್ದುಕೊಳ್ಳಬೇಕು ಮತ್ತು ಆ ಮೂಲಕ ನಾವು ಸಾಧನೆಯನ್ನು ಮಾಡಬೇಕು. ಪ್ರಕೃತಿ, ಪರಿಸರದ ಶಕ್ತಿಯೊಂದಿಗೆ ಹೊಂದಿಕೊಂಡು ಬಾಳುವಂತೆಯೇ, ನಮ್ಮ ನೃತ್ಯ ಕಲಿಕೆಯೂ ಹೊಂದಾಣಿಕೆಯೊಂದಿಗೆ ಸಾಗುತ್ತದೆ. ಅಂದರೆ ಹೆಜ್ಜೆಗಾರಿಕೆಯು ಭೂಮಿಯ ಗುರುತ್ವಾಕರ್ಷಣ ಶಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಸೌಂದರ್ಯದ ಪರಿಕಲ್ಪನೆಗೆ ಒಪ್ಪುವ ಮಾದರಿಯಲ್ಲಿ ಇರುತ್ತದೆ. ಭಾರತೀಯ ಕಲಾವಿದರು ಅದಕ್ಕೆ ಪೂರಕವಾಗಿ ಅಂತರಂಗವನ್ನು ಸಜ್ಜುಗೊಳಿಸಿಕೊಳ್ಳುತ್ತಾರೆ. ನಾನು ಮಾಂಟ್ರಿಯಲ್‌ನಲ್ಲಿರುವಾಗ ಕೊರಿಯಾಗ್ರಫರ್, ದೇಹದ ಸಮತೋಲನ, ಸಾಧನೆಗಳು ಹೇಗಿರಬೇಕೆಂದು ಅರ್ಥವಾಗಬೇಕಾದರೆ ಭಾರತೀಯ ನೃತ್ಯ ಕಲಿಯಬೇಕು ಎಂದು ನನ್ನ ಓರಗೆಯ ಇತರ ನೃತ್ಯಾಭ್ಯಾಸಿಗಳಿಗೆ ಸಲಹೆ ಮಾಡುತ್ತಿದ್ದರು. ದೇಹಕ್ಕೆ ನೃತ್ಯವನ್ನು ಹೇಗೆ ಕಲಿಸಬೇಕೋ, ಹಾಗೆಯೇ ದೇಹವನ್ನು ಅರಿಯುವುದಕ್ಕೂ ನೃತ್ಯವು ಸಹಕಾರಿ. ಯಾವುದನ್ನೂ ಮೇಲು ಕೀಳು ಎನ್ನುವಂತಿಲ್ಲ.

**◆ ಸಂಸ್ಕೃತ ಭಾಷಾಜ್ಞಾನವು ನಿಮ್ಮ ಸಾಧನೆಯಲ್ಲಿ ಹೇಗೆ ಸಹಕಾರಿ ಆಯಿತು?**

ಭಗವತಿಯ ಆಶೀರ್ವಾದದಿಂದ ನನಗೆ ಪ್ರಾಥಮಿಕ ಶಿಕ್ಷಣದಲ್ಲಿಯೇ ಸಂಸ್ಕೃತ ಕಲಿಯುವ ಅವಕಾಶ ಸಿಕ್ಕಿತು. ನನ್ನ ನೃತ್ಯ ಪರಿಕಲ್ಪನೆಗಳನ್ನು ರೂಪಿಸುವ ವೇಳೆಯೂ ಈ ಜ್ಞಾನವು ಬಹಳ ಸಹಕಾರಿಯಾಗಿದೆ. ನಮ್ಮ ಮಹಾಕಾವ್ಯಗಳು ಮತ್ತು ಪೌರಾಣಿಕ ಕಥೆಗಳನ್ನು ನೇರವಾಗಿ ಸಂಸ್ಕೃತದಲ್ಲಿ ಹೇಗಿದೆ ಎಂದು ತಿಳಿದುಕೊಳ್ಳುವುದರಿಂದ ಹೊಸ ಪರಿಕಲ್ಪನೆಗಳು ಅಚಾನಕ್ ಎಂಬಂತೆ ನನಗೆ ಹೊಳೆಯುತ್ತಿದ್ದವು. ಎಲ್ಲರಿಗೂ ಗೊತ್ತಿರುವ ದ್ರೌಪದಿಯ ಕಥೆಯನ್ನೇ ನಾನೂ ಪ್ರಸ್ತುತಪಡಿಸುವಾಗ, ಆಕೆಯ ಪ್ರಶ್ನೆಗಳು ಅಂದಿನ ರಾಜಸಭೆಯಲ್ಲಿ ಹೇಗೆ ಪ್ರಸ್ತುತವಾಗಿದ್ದವು ಮತ್ತು ಅವೆಲ್ಲ ಇಂದು ಹೇಗೆ ಅನ್ವಯವಾಗುತ್ತವೆ ಎಂಬುದನ್ನು ಅರ್ಥಮಾಡಿಕೊಂಡಿರುವೆ. 'ದ್ರೌಪದಿ' ಕಥೆಯನ್ನು ನಾನು 1994ರಲ್ಲಿ ಸಂಸದರ ಸಭೆಯಲ್ಲಿ ಪ್ರಸ್ತುತಪಡಿಸಿದ್ದೆ. ಅದೇ ರೀತಿ ಕಾಳಿಂಗ ಮರ್ದನ ಕೃಷ್ಣ ರೂಪವು, ಇಂದು ಮಾಲಿನ್ಯಗೊಂಡಿರುವ ಯಮುನೆಯನ್ನು ಶುಚಿಗೊಳಿಸುವ ರೂಪಕದಂತೆ ನನಗೆ ಭಾಸವಾಗಿದೆ. ಇನ್ನು ವೈಚಾರಿಕ